# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2201(2558) |
| 2. ಸದಸ್ಯರ ಹೆಸರು | : | ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 24.03.2022 |
| 4. ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಪ್ರಶ್ನೆ | ಉತ್ತರ |
|---|---|
| ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC) ಯನ್ನು ಪ್ರಾರಂಭಿಸಲಾಗಿದ್ದು ಯಾವಾಗ; ಈ ಸಂಸ್ಥೆಯ ರಚನೆ (Structure) ಯಾವ ರೀತಿ ಇದೆ; ಈ ಸಂಸ್ಥೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳು ಎಷ್ಟು; (ವರ್ಗವಾರು ವಿವರ ನೀಡುವುದು). ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ವೃಂದವಾರು ವಿವರ ನೀಡುವುದು) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC) ಯನ್ನು 1959 ರಲ್ಲಿ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ 1951ರ ಪ್ರಕಾರ ಪ್ರಾರಂಭಿಸಲಾಯಿತು.<br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ರಚನೆ (Structure) ಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಒಟ್ಟು 1138 ಹುದ್ದೆಗಳು ಮಂಜೂರಾಗಿರುತ್ತದೆ (ದಿನಾಂಕ 08.02.2022 ರಂತೆ). ಈ ಹುದ್ದೆಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.<br>ಸಂಸ್ಥೆಯಲ್ಲಿ ಪ್ರಸ್ತುತ 542 ಹುದ್ದೆಗಳು ಖಾಲಿ ಇರುತ್ತವೆ. ಇದರ ವೃಂದವಾರು ಪಟ್ಟಿಯನ್ನೂ ಸಹ ಅನುಬಂಧ – 2 ರಲ್ಲಿ ನೀಡಲಾಗಿದೆ. |
| ಆ) ಕೆ.ಎಸ್.ಎಫ್.ಸಿ. ಸಂಸ್ಥೆಯಲ್ಲಿ ಹೂಡಿಕೆ ಮಾಡಿರುವ ಬಂಡವಾಳ ಎಷ್ಟು; ಈ ಬಂಡವಾಳವನ್ನು ಯಾವ ಯಾವ ಮೂಲಗಳಿಂದ ಸಂಗ್ರಹಿಸಲಾಗುತ್ತಿದೆ; ಸಂಗ್ರಹಣೆ ಮಾಡುವ ಹಣಕ್ಕೆ ಎಷ್ಟು ಬಡ್ಡಿ ನೀಡಲಾಗುತ್ತಿದೆ? (ವಿವರ ನೀಡುವುದು) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ದಿನಾಂಕ 31.12.2021ರ ಅಂತ್ಯಕ್ಕೆ ರೂ.895.39 ಕೋಟಿ ರೂ.ಗಳ ಷೇರು ಬಂಡವಾಳ ಹೂಡಿಕೆಯಾಗಿರುತ್ತದೆ. ಹೂಡಿಕೆಯಾಗಿರುವ ಸಾಮಾನ್ಯ ಷೇರು ಬಂಡವಾಳದ ವಿವರ ಈ ಕೆಳಕಂಡಂತಿದೆ:<br>(ಮೊತ್ತ ಕೋಟಿ ರೂ.ಗಳಲ್ಲಿ) |

| ಕ್ರ.ಸಂ. | ವಿವರಗಳು | ಮೊತ್ತ |
|---|---|---|
| 01. | ಕರ್ನಾಟಕ ರಾಜ್ಯ ಸರ್ಕಾರ | 856.75 |
| 02. | ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ | 38.38 |
| 03. | ಭಾರತೀಯ ಜೀವ ವಿಮಾ ನಿಗಮ | 0.16 |

<table>
<tr>
<td></td>
<td>
<table>
<tr><td>04.</td><td>ಸಾರ್ವಜನಿಕ ಸ್ವಾಮ್ಯದ ಬ್ಯಾಂಕುಗಳು</td><td>0.08</td></tr>
<tr><td>05.</td><td>ಇತರೆ ವ್ಯಕ್ತಿಗಳು</td><td>0.02</td></tr>
<tr><td></td><td>ಒಟ್ಟು ಮೊತ್ತ</td><td>895.39</td></tr>
</table>
<br>
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಮೇಲೆ ತಿಳಿಸಿರುವ ಹೂಡಿಕೆಯು ಸಾಮಾನ್ಯ ಷೇರು ಬಂಡವಾಳವಾಗಿರುವುದರಿಂದ ಯಾವುದೇ ಬಡ್ಡಿಯನ್ನು ನೀಡಲಾಗುತ್ತಿಲ್ಲ.
</td>
</tr>
<tr>
<td>ಇ) ಕೆ.ಎಸ್.ಎಫ್.ಸಿ.ಯಿಂದ ಸಾಲ ಸೌಲಭ್ಯ ನೀಡಲು ರೂಪಿಸಿರುವ ವಿವಿಧ ಯೋಜನೆಗಳಾವುವು? (ಯೋಜನೆವಾರು ಸಂಪೂರ್ಣ ವಿವರ ನೀಡುವುದು)</td>
<td>
ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ ಪ್ರಸ್ತುತ ಇರುವ ವಿವಿಧ ರೀತಿಯ ಸಾಲದ ಯೋಜನೆಗಳ ವಿವರಗಳು ಈ ಕೆಳಕಂಡಂತಿರುತ್ತವೆ:<br><br>
1. ಸಾಮಾನ್ಯ ಯೋಜನೆ: ಹೊಸ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಘಟಕಗಳ ಮತ್ತು ಸೇವಾಕ್ಷೇತ್ರದ ಉದ್ದಿಮೆಗಳ ಸ್ಥಾಪನೆ / ವಿಸ್ತರಣೆ / ಆಧುನೀಕರಣ / ವೈವಿಧ್ಯೀಕರಣಗೊಳಿಸಲು ಸಾಲದ ನೆರವು.<br><br>
2. ಮೂಲಭೂತ ಸೌಕರ್ಯಗಳ ಯೋಜನೆಗಳಿಗೆ ನೆರವು: ಕೈಗಾರಿಕಾ ವಸಾಹತುಗಳು, ಸಾಫ್ಟವೇರ್ ಪಾರ್ಕುಗಳು, ಸಿದ್ಧ ನಿರ್ಮಿಸಿದ ಷೋರೂಂಗಳು, ಗೋದಾಮು, ಉಗ್ರಾಣ ಇತ್ಯಾದಿಗಳ ನಿರ್ಮಾಣಕ್ಕೆ ಸಾಲ ಸೌಲಭ್ಯ ದೊರೆಯುತ್ತದೆ.<br><br>
3. ಹೊಸ ಘಟಕಗಳಿಗೆ ಏಕ ಗವಾಕ್ಷಿ ಯೋಜನೆ (ಸಿಂಗಲ್ ವಿಂಡೋ ಯೋಜನೆ): ಹೊಸದಾಗಿ ಸ್ಥಾಪಿಸಲಾಗುವ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಘಟಕಗಳಿಗೆ ಸ್ಥಿರಾಸ್ತಿಗಾಗಿ ಅವಧಿ ಸಾಲದೊಂದಿಗೆ ಅವಶ್ಯಕ ದುಡಿಮೆ ಬಂಡವಾಳ ಅವಧಿ ಸಾಲವನ್ನು ನೀಡಲಾಗುವುದು.<br><br>
4. ಸಣ್ಣ ಪ್ರಮಾಣದ ರಸ್ತೆ ಸಾರಿಗೆ ಯೋಜನೆ (SRTO): ವಾಹನದ ಅಡಿಕಟ್ಟು (ಬಾಡಿ ಬಿಲ್ಡಿಂಗ್) ಆರಂಭ ತೆರಿಗೆ ಹಾಗೂ ವಿಮೆಗಾಗಿ ತಗಲುವ ವೆಚ್ಚವನ್ನು ಭರಿಸಲು ಅವಧಿ ಸಾಲವನ್ನು ನೀಡಲಾಗುವುದು.
</td>
</tr>
</table>

| | |
|---|---|
| | 5. **ಪರಿಶಿಷ್ಟ ಜಾತಿ / ಪಂಗಡದ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**<br>• ಪರಿಶಿಷ್ಟ ಜಾತಿ / ಪಂಗಡದ ಉದ್ದಿಮೆದಾರರು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಘಟಕಗಳಿಗೆ ಮತ್ತು ಸೇವಾ ಕ್ಷೇತ್ರದ ಉದ್ದಿಮೆಗಳ ಸ್ಥಾಪನೆಗೆ ಹಾಗೂ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಶೇ.4ರ ವಾರ್ಷಿಕ ಬಡ್ಡಿ ದರದಲ್ಲಿ ಅವಧಿಸಾಲವನ್ನು ನೀಡಲಾಗುತ್ತಿದೆ. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿ ದರದ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿಸಲಾಗುತ್ತದೆ. ಈ ಯೋಜನೆಯಡಿ ಕನಿಷ್ಠ 10.00 ಲಕ್ಷ ರೂ.ಗಳಿಂದ ಗರಿಷ್ಠ 10.00 ಕೋಟಿ ರೂ.ಗಳವರೆಗೆ ಸಾಲದ ನೆರವು ದೊರೆಯುತ್ತದೆ. ಶೇ.4ರ ವಾರ್ಷಿಕ ಬಡ್ಡಿ ದರದಲ್ಲಿ ನೀಡಲಾಗುವ ಅವಧಿ ಸಾಲದ ಮರುಪಾವತಿಯ ಅವಧಿಯು ಗರಿಷ್ಠ 8 ವರ್ಷ.<br>• ಪರಿಶಿಷ್ಟ ಜಾತಿ / ಪಂಗಡದ ಉದ್ಯಮಿಗಳಿಗಾಗಿ ಅತಿ ಸಣ್ಣ ಮತ್ತು ಸಣ್ಣ ಪ್ರಮಾಣದ ಯೋಜನಾ ವೆಚ್ಚ ರೂ.2.00 ಕೋಟಿ ಮೀರದ ಕೈಗಾರಿಕೆಗಳನ್ನು ಹೊಸದಾಗಿ ಸ್ಥಾಪಿಸುವವರಿಗೆ ಪೂರಕ ಭದ್ರತೆ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.<br>• ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಉದ್ಯಮಿಗಳ ಜವಳಿ ಮತ್ತು ಕೈಮಗ್ಗ ಘಟಕಗಳಿಗೆ ವಿಶೇಷ ಹಣಕಾಸಿನ ಯೋಜನೆ. |
| | 6. **ಎಲ್ಲಾ ವರ್ಗದ ಉದ್ದಿಮೆದಾರರಿಗೆ ಮೊದಲ ಪೀಳಿಗೆಯವರು ಸೇರಿದಂತೆ ಬಡ್ಡಿ ಸಹಾಯಧನ ಯೋಜನೆ:**<br>ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಹೊಸ ಮತ್ತು ಹಾಲಿ ಕೈಗಾರಿಕಾ ಘಟಕಗಳು ಉತ್ಪಾದನೆಗೆ ಉಪಯೋಗಿಸುವ ಕಟ್ಟಡ ಮತ್ತು ಯಂತ್ರೋಪಕರಣಗಳಿಗೆ, ಕನಿಷ್ಠ ರೂ.5.00 ಲಕ್ಷ ಗರಿಷ್ಠ ರೂ.500.00 ಲಕ್ಷದವರೆಗೆ ಅವಧಿ ಸಾಲ. ಈ ಯೋಜನೆಯು ದಿನಾಂಕ 01.10.2018ರಿಂದ ಜಾರಿಯಲ್ಲಿದೆ. ಈ ಮೊದಲು ಮೊದಲ ಪೀಳಿಗೆ ಉದ್ದಿಮೆದಾರರಿಗೆ ಈ ಯೋಜನೆಯಡಿಯಲ್ಲಿ ನೆರವು ನೀಡಲಾಗುತ್ತಿತ್ತು. ಈ ಯೋಜನೆ ಅನ್ವಯ ಅರ್ಹ ಉದ್ದಿಮೆದಾರರಿಗೆ ಶೇ.6 ರಷ್ಟು ಬಡ್ಡಿ ದರದಲ್ಲಿ ಸಾಲದ ಸೌಲಭ್ಯ ನೀಡಲಾಗುವುದು. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿ |

| | |
|---|---|
| | ದರದ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಿಂದ ಮರುಪಾವತಿಸಲಾಗುತ್ತದೆ.<br><br>**7. ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**<br>ಈ ಯೋಜನೆಯಡಿ ಸೇವಾ ಕ್ಷೇತ್ರದಲ್ಲಿ ಸಣ್ಣ ಹಾಗೂ ಮಧ್ಯಮ ವರ್ಗದ ಘಟಕಗಳನ್ನು ಸ್ಥಾಪಿಸುವ ಮಹಿಳಾ ಉದ್ದಿಮೆದಾರರಿಗೆ 200.00 ಲಕ್ಷ ರೂ.ಗಳವರೆಗೆ ಶೇ.4 ರಷ್ಟು ಬಡ್ಡಿ ದರದಲ್ಲಿ ಸಾಲದ ಸೌಲಭ್ಯ ನೀಡಲಾಗುವುದು. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿ ದರದ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮರುಪಾವತಿಸಲಾಗುತ್ತದೆ. |


(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಸಂಖ್ಯೆ: ಆಇ 36 ಬಿಎಫ್‌ಸಿ 2022

ಅನುಬಂಧ - 1

# KARNATAKA STATE FINANCIAL CORPORATION

***ORGANISATION CHART***



ಅನುಬಂಧ-2

# KARNATAKA STATE FINANCIAL CORPORATION

**Manpower Authorisation Position Including Posts Earmarked for Hydeabad region as on 08-Feb-2022**

| Designation | Sanction | | | Filled | | | Vacant | | |
|---|---|---|---|---|---|---|---|---|---|
| | General | Hyd-Kar | Total | General | Hyd-Kar | Total | General | Hyd-Kar | Total |
| MANAGING DIR. | 1 | 0 | 1 | 1 | 0 | 1 | 0 | 0 | 0 |
| EXECUTIVE DIRECTOR | 2 | 0 | 2 | 0 | 0 | 0 | 2 | 0 | 2 |
| GENERAL MANAGER | 5 | 0 | 5 | 3 | 0 | 3 | 2 | 0 | 2 |
| DY. GEN. MANAGER | 16 | 0 | 16 | 6 | 0 | 6 | 10 | 0 | 10 |
| DY.GENERAL MANAGER(LEGAL) | 1 | 0 | 1 | 0 | 0 | 0 | 1 | 0 | 1 |
| ASST.GEN.MANAGER | 25 | 0 | 25 | 21 | 0 | 21 | 4 | 0 | 4 |
| MANAGER(F&A) | 32 | 0 | 32 | 14 | 0 | 14 | 18 | 0 | 18 |
| MANAGER(TECH) | 33 | 0 | 33 | 20 | 0 | 20 | 13 | 0 | 13 |
| MANAGER(LEGAL) | 12 | 0 | 12 | 4 | 0 | 4 | 8 | 0 | 8 |
| MANAGER(E&P) | 8 | 0 | 8 | 5 | 0 | 5 | 3 | 0 | 3 |
| DY.MANAGER(F&A) | 112 | 10 | 122 | 28 | 5 | 33 | 84 | 5 | 89 |
| DY.MANAGER(TECH) | 93 | 11 | 104 | 33 | 0 | 33 | 60 | 11 | 71 |
| DY.MANAGER(LEGAL) | 29 | 7 | 36 | 6 | 1 | 7 | 23 | 6 | 29 |
| DY.MANAGER(E&P) | 20 | 4 | 24 | 10 | 1 | 11 | 10 | 3 | 13 |
| DY.MANAGER(PS) | 2 | 0 | 2 | 2 | 0 | 2 | 0 | 0 | 0 |
| DY.MGR(LIBRN) | 1 | 0 | 1 | 0 | 0 | 0 | 1 | 0 | 1 |
| DY.MGR(T-SUP) | 0 | 0 | 0 | 1 | 0 | 1 | -1 | 0 | -1 |
| MANAGER(SYSTEM) | 1 | 0 | 1 | 0 | 0 | 0 | 1 | 0 | 1 |
| **Sub - Total** | 393 | 32 | 425 | 154 | 7 | 161 | 239 | 25 | 264 |
| ASST.MANAGER(PA) | 49 | 7 | 56 | 37 | 5 | 42 | 12 | 2 | 14 |
| ASST.MANAGER | 108 | 14 | 122 | 67 | 10 | 77 | 41 | 4 | 45 |
| ASST.MANAGER(LIBRARY) | 1 | 0 | 1 | 0 | 0 | 0 | 1 | 0 | 1 |
| ASSISTANT | 192 | 23 | 215 | 137 | 9 | 146 | 55 | 14 | 69 |
| STENO | 76 | 9 | 85 | 48 | 7 | 55 | 28 | 2 | 30 |
| RECEPTIONIST | 5 | 0 | 5 | 1 | 0 | 1 | 4 | 0 | 4 |
| ASSISTANT(SUPERNUMERARY) | 0 | 0 | 0 | 2 | 0 | 2 | -2 | 0 | -2 |
| TYPIST | 41 | 7 | 48 | 10 | 3 | 13 | 31 | 4 | 35 |
| CLERK | 26 | 2 | 28 | 23 | 2 | 25 | 3 | 0 | 3 |
| CLERK (SUPERNUMERARY) | 0 | 0 | 0 | 15 | 6 | 21 | -15 | -6 | -21 |
| **Sub - Total** | 498 | 62 | 560 | 340 | 42 | 382 | 158 | 20 | 178 |
| SR.DRIVER | 15 | 0 | 15 | 13 | 0 | 13 | 2 | 0 | 2 |
| SR.DAFEDAR | 8 | 2 | 10 | 3 | 0 | 3 | 5 | 2 | 7 |
| DAFEDAR | 19 | 1 | 20 | 17 | 1 | 18 | 2 | 0 | 2 |
| DRIVER | 49 | 9 | 58 | 11 | 4 | 15 | 38 | 5 | 43 |
| PEON | 41 | 9 | 50 | 4 | 0 | 4 | 37 | 9 | 46 |
| **Sub - Total** | 132 | 21 | 153 | 48 | 5 | 53 | 84 | 16 | 100 |
| **Total** | **1023** | **115** | **1138** | **542** | **54** | **596** | **481** | **61** | **542** |